ಶ್ರೀ ಕೆ.ಜೆ. ಜಾರ್ಜ್ : ಆಯಿತು. ತಮ್ಮ ಆದೇಶ ಪ್ರಕಾರ ಮಾಡುವುದಕ್ಕೆ ಸೂಚನೆ ನೀಡುತ್ತೇನೆ.

ಅಧ್ಯಕ್ಷರು : ಆಯಿತು. ಮಾನ್ಯ ಸದಸ್ಯರೆ, ಮಾಡುತ್ತಾರೆ ಬಿಡಿ.

ಶ್ರೀ ಪಿ.ಆರ್. ಸುಧಾಕರ ಲಾಲ್ : ಮಾನ್ಯ ಅಧ್ಯಕ್ಷರೆ, ಕೋಳಾಲದಲ್ಲಿ ಪೊಲೀಸ್ ಠಾಣೆ ತೆರವು ಬಗ್ಗೆ ಪರಿಶೀಲಿಸಲಾಗುವುದೆಂದು ಇನ್ನೊಂದು ಉಪ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ಇಲ್ಲಿಯೂ ಕೂಡ ಸ್ಪಷ್ಟತೆ ಇಲ್ಲ. ನಾವು ತಕ್ಷಣ ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಆ ಭಾಗದ ಜನರಿಗೆ ಸಹಾಯವಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡುವ ಬಗ್ಗೆ ಸಾಕಷ್ಟು ಬೇಡಿಕೆಗಳು ಬರುತ್ತಿವೆ. ಆದರೆ, ಅದಕ್ಕೊಂದು ಗೈಡ್‌ಲೈನ್ಸ್ ಮಾಡಿದ್ದೇವೆ. ಆ ಪ್ರಕಾರ ನಾವು ಆದ್ಯತೆ ಮೇಲೆ ತೆಗೆದುಕೊಳ್ಳುತ್ತಿದ್ದೇವೆ. ಈಗ outpost ನಲ್ಲಿ ಪ್ರಾರಂಭ ಮಾಡಿದ್ದಾರೆ. ಆ outpost ನಲ್ಲಿರುವುದನ್ನು ಆದ್ಯತೆ ಮೇರೆಗೆ sanctioned outpost ಆಗಿ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಖಾಲಿ ಇರುವ ಹುದ್ದೆಗಳ ಭರ್ತಿ

22 (11) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಜಲಮಂಡಳಿಗೆ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; ಈ ಪೈಕಿ ಖಾಲಿ ಇರುವ ಹುದ್ದೆಗಳೆಷ್ಟು ; (ವಲಯವಾರು ವಿವರ ನೀಡುವುದು

(ಆ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು; ಎಷ್ಟು ವರ್ಷಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ;

(ಇ) ಜಲಮಂಡಳಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ 1996 ರಿಂದ ಈವರೆಗೆ ಬಂದಿರುವ ಅರ್ಜಿಗಳೆಷ್ಟು; ಈ ಪೈಕಿ ಎಷ್ಟು ಜನರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ; ಬಾಕಿ ಇರುವ ಅರ್ಜಿಗಳೆಷ್ಟು;

(ಈ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡದಿರಲು ಕಾರಣವೇನು; ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವುದನ್ನು ತಡೆಹಿಡಿಯಲಾಗಿದೆಯೇ; ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ; (ಆದೇಶದ ಪ್ರತಿ ಒದಗಿಸುವುದು)

(ಉ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಬೆಂಗಳೂರು ಜಲಮಂಡಳಿಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳು 3500. ಅವುಗಳಲ್ಲಿ ವಿವಿಧ ವೃಂದದ ಒಟ್ಟು 799 ನೇರ ನೇಮಕಾತಿಯ ಹುದ್ದೆಗಳು ಖಾಲಿ ಇರುತ್ತವೆ. ವಲಯವಾರು ವಿವರಗಳು ಈ ಕೆಳಗಿನಂತೆ ಇದೆ.

ವಲಯ	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ
ಅಧ್ಯಕ್ಷರ/ಮು.ಆ.ಅ.ಕಾ	193
ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿ	145
ಪ್ರಧಾನ ಅಭಿಯಂತರರು (ನಿರ್ವಹಣೆ)	2446
ಮುಖ್ಯ ಅಭಿಯಂತರರು (ಡಬ್ಲ್ಯೂ.ಡಬ್ಲ್ಯೂ.ಎಂ.)	163
ಮುಖ್ಯ ಅಭಿಯಂತರರು (ಕಾವೇರಿ)	342
ಮುಖ್ಯ ಅಭಿಯಂತರರು (ಗುಣ ಆಶ್ವಾಸನೆ)	107
ಮುಖ್ಯ ಅಭಿಯಂತರರು (ಯೋಜನೆ)	104

(ಆ) 180 ಹುದ್ದೆಗಳನ್ನು ಭರ್ತಿ ಮಾಡಲು ಹೈದರಾಬಾದ್–ಕರ್ನಾಟಕ ಮೀಸಲಾತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ ಅಧಿಸೂಚನೆಯನ್ನು ಹೊರಡಿಸಲು ವಿಳಂಭವಾಗಿರುತ್ತದೆ. ಉಳಿದಂತೆ 619 ಹುದ್ದೆಗಳನ್ನು ನೇರ

ನೇಮಕಾತಿಯಿಂದ ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ದಿನಾಂಕ 31–07–2010 ರಿಂದ ನಿವೃತ್ತಿ ಪ್ರಾರಂಭವಾಗಿದ್ದು, ವಿವಿಧ ವೃಂದಗಳಲ್ಲಿ ವಾರ್ಷಿಕ ಸರಾಸರಿ 170 ಮಂದಿ ನಿವೃತ್ತಿ ಹೊಂದಿರುತ್ತಾರೆ. 2008ರ ನೇರ ನೇಮಕಾತಿಯ ಅಧಿಸೂಚನೆಯಲ್ಲಿ ಭರ್ತಿಯಾಗದೇ ವಿವಿಧ ವೃಂದದ 105 ಹುದ್ದೆಗಳು ಹಾಗೂ 75 ತಾಂತ್ರಿಕ ಹುದ್ದೆಗಳು ಖಾಲಿ ಇರುತ್ತದೆ.

(ಇ) ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ 1996 ರಿಂದ ಈವರೆಗೆ ಬಂದಿರುವ ಅರ್ಜಿಗಳು 480 ಆಗಿದ್ದು, ಈ ಪೈಕಿ 472 ಅರ್ಜಿಗಳನ್ನು ವಿಲೇವಾರಿ ಮಾಡಿ ಅನುಕಂಪ ಆಧಾರದ ನೇಮಕಾತಿಯನ್ನು ಮಾಡಿಕೊಳ್ಳಲಾಗಿದೆ. 08 ಅರ್ಜಿಗಳು ಬಾಕಿ ಇರುತ್ತವೆ.

(ಈ) ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಬರುವ ಅರ್ಜಿಗಳನ್ನು ನಿಯಮಗಳ ರೀತ್ಯ ಪರಿಶೀಲಿಸಿ ಕ್ರಮಕ್ಕೈಗೊಳ್ಳಲಾಗುತ್ತಿದೆ. ಕ್ರಮಬದ್ಧವಾಗಿರುವ ಯಾವುದೇ ಅರ್ಜಿಯನ್ನು ತಡೆ ಹಿಡಿದಿರುವುದಿಲ್ಲ. ಅನುಕಂಪದ ಆಧಾರದ ನೇಮಕಾತಿ ಮಾಡುವುದನ್ನು ತಡೆಹಿಡಿಯುವ ಬಗ್ಗೆ ಯಾವುದೇ ಸರ್ಕಾರ ಆದೇಶ ಹೊರಡಿಸಿರುವುದಿಲ್ಲ.

(ಉ) ಚಾಲ್ತಿಯಲ್ಲಿರುವ ಅನುಕಂಪದ ಆಧಾರದ ನೇಮಕಾತಿ ನಿಯಮಗಳಂತೆ ಕ್ರಮವಹಿಸಲಾಗುತ್ತಿದೆ.

ವಿಧಾನ ಸಭೆ ಸದಸ್ಯರಾದ ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಇವರ ಚುಕ್ಕೆ ಗುರುತಿನ ಪ್ರಶ್ನೆ 11 ಕ್ಕೆ ಪೂರಕ ಟಿಪ್ಪಣಿ

ಬೆಂಗಳೂರು ಜಲಮಂಡಳಿಗೆ ಒಟ್ಟು 3500 ಹುದ್ದೆಗಳು ಮಂಜೂರಾಗಿರುತ್ತವೆ. ಅವುಗಳಲ್ಲಿ 799 ಹುದ್ದೆಗಳು ಖಾಲಿ ಇರುತ್ತವೆ. ವಲಯವಾರು ವಿವರಗಳು ಈ ಕೆಳಗಿನಂತೆ ಇವೆ.

ವಲಯ	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ
ಅಧ್ಯಕ್ಷರ/ಮು.ಆ.ಅ.ಕಾ	193
ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿ	145
ಪ್ರಧಾನ ಅಭಿಯಂತರರು (ನಿರ್ವಹಣೆ)	2446
ಮುಖ್ಯ ಅಭಿಯಂತರರು (ಡಬ್ಲ್ಯೂ.ಡಬ್ಲ್ಯೂ.ಎಂ.)	163
ಮುಖ್ಯ ಅಭಿಯಂತರರು (ಕಾವೇರಿ)	342
ಮುಖ್ಯ ಅಭಿಯಂತರರು (ಗುಣ ಆಶ್ವಾಸನೆ)	107
ಮುಖ್ಯ ಅಭಿಯಂತರರು (ಯೋಜನೆ)	104

ಈ 799 ನೇರ ನೇಮಕಾತಿಯ ಖಾಲಿ ಹುದ್ದೆಗಳಲ್ಲಿ 180 ಹುದ್ದೆಗಳನ್ನು ಭರ್ತಿ ಮಾಡಲು ಈ ಹಿಂದೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ಹೈದರಾಬಾದ್–ಕರ್ನಾಟಕ ಮೀಸಲಾತಿ ಕಲ್ಪಿಸಲು ಕ್ರಮಕೈಗೊಳ್ಳಲಾಗಿರುವುದರಿಂದ ಅಧಿಸೂಚನೆಯನ್ನು ಹೊರಡಿಸಲು ವಿಳಂಭವಾಗಿರುತ್ತದೆ. ಉಳಿದಂತೆ 619 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರಕ್ಕೆ ದಿನಾಂಕ 25–06–2013 (ವಿವಿಧ ವೃಂದದ 408 ಹುದ್ದೆಗಳು) ಮತ್ತು 13–11–2013 (ವಿವಿಧ ವೃಂದದ 211 ಹುದ್ದೆಗಳು) ರಂದು ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತದೆ.

ದಿನಾಂಕ 31–07–2010 ರಿಂದ ನಿವೃತ್ತಿ ಪ್ರಾರಂಭವಾಗಿದ್ದು ವಿವಿಧ ವೃಂದಗಳಲ್ಲಿ ವಾರ್ಷಿಕ ಸರಾಸರಿ 170 ಮಂದಿ ನಿವೃತ್ತಿ ಹೊಂದಿರುತ್ತಾರೆ. 2008ರ ನೇರ ನೇಮಕಾತಿಯ ಅಧಸೂಚನೆಯಲ್ಲಿ ಭರ್ತಿಯಾಗದೇ ಉಳಿದಿರುವ ವಿವಿಧ ವೃಂದದ 105 ಹುದ್ದೆಗಳು ಹಾಗೂ ಸರ್ಕಾರದಿಂದ ಅನುಮೋದಿಸಲ್ಪಟಿರುವ 75 ತಾಂತ್ರಿಕ ಹುದ್ದೆಗಳು ಖಾಲಿ ಇರುತ್ತವೆ. ಒಟ್ಟಾರೇ 799 ಹುದ್ದೆಗಳು ಖಾಲಿ ಇರುತ್ತವೆ.

ಬೆಂಗಳೂರು ಜಲ ಮಂಡಳಿಯ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ 1996 ರಿಂದ ಈವರೆಗೆ 480 ಅರ್ಜಿಗಳು ಬಂದಿದ್ದು, ಈ ಪೈಕಿ 472 ಅರ್ಜಿಗಳನ್ನು ವಿಲೇವಾರಿ ಮಾಡಿ ಅನುಕಂಪ ಆಧಾರದ ನೇಮಕಾತಿಯನ್ನು ಮಾಡಿಕೊಳ್ಳಲಾಗಿದೆ. 08 ಅರ್ಜಿಗಳು ಬಾಕಿಯಿದ್ದು, ಇವುಗಳಲ್ಲಿ 04 ಅರ್ಜಿಗಳನ್ನು ಪ್ರಸ್ತಾವನೆಯನ್ನು ಮಂಡಿಸಲಾಗಿದೆ. 03 ಅರ್ಜಿಗಳ ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿರುವುದಿಲ್ಲ ಹಾಗೂ ಒಂದು ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಬರುವ ಅರ್ಜಿಗಳನ್ನು ನಿಯಮಗಳ ರೀತ್ಯ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಕ್ರಮಬದ್ಧವಾಗಿರುವ ಯಾವುದೇ ಅರ್ಜಿಯನ್ನು ತಡೆ ಹಿಡಿದಿರುವುದಿಲ್ಲ. ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು, 1996 ನ್ನು ಜಲಮಂಡಳಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಂಡು ಪಾಲಿಸಲಾಗುತ್ತಿದ್ದು, ಚಾಲ್ತಿಯಲ್ಲಿರುವ ಅನುಕಂಪದ ಆಧಾರದ ನೇಮಕಾತಿ ನಿಯಮಗಳಂತೆ ಕ್ರಮವಹಿಸಲಾಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 3500 ಹುದ್ದೆಗಳಲ್ಲಿ 799 ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಿಕೊಳ್ಳುತ್ತೀರಿ? ಏಕೆಂದರೆ, ಇವರೆಲ್ಲರನ್ನು 6 ತಿಂಗಳೊಳಗೆ ನೇಮಕಾತಿ ಮಾಡಿಕೊಳ್ಳಬೇಕೆಂದು ನವೆಂಬರ್ ತಿಂಗಳಲ್ಲಿ ತಾವೇ ಆದೇಶ ಕೊಟ್ಟಿದ್ದೀರಿ. ಆದರೆ ಇದುವರೆಗೂ ಆಗಿಲ್ಲ. ಎರಡನೇ ಪ್ರಶ್ನೆ ಏನೆಂದರೆ, ಬೆಂಗಳೂರು ಮಹಾನಗರ ಪಾಲಿಕೆ ಇದ್ದಾಗ ಈ ಸಂಖ್ಯೆ ಸರಿಯಾಗಿತ್ತು. ಆದರೆ, ಈಗ ಬಿಬಿಎಂಪಿ ಆಗಿದೆ. ಇದು 800 ಚ.ಕಿ.ಮೀ. ವ್ಯಾಪ್ತಿ ಇದೆ. ಈ ಹಿನ್ನೆಲೆಯಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ, ಬೆಂಗಳೂರಿನಲ್ಲಿ 800 ಚ.ಕಿ.ಮೀ. ವ್ಯಾಪ್ತಿಗೆ 3500 sanctioned post ಇದೆ. ಆದರೆ ಹೈದರಾಬಾದ್‌ನಲ್ಲಿ 688 ಚ.ಕಿ.ಮೀ. ಗೆ 6000 sanctioned post ಇದೆ. ಬೆಂಗಳೂರು ಬೆಳೆಯುತ್ತಿರುವುದರಿಂದ ಜಲಮಂಡಳಿಯ ಕಾರ್ಯವನ್ನು ನೋಡಿಕೊಂಡು sanctioned post ಅನ್ನು ಜಾಸ್ತಿ ಮಾಡುತ್ತೀರಾ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಖಾಲಿ ಹುದ್ದೆಗಳು ಇರುವುದು ನಿಜ. ಇವತ್ತು 799 ಹುದ್ದೆಗಳು ಖಾಲಿ ಇವೆ. ಇದರಲ್ಲಿ 180 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಇತ್ತೀಚೆಗೆ ಮಂಜೂರಾತಿಯನ್ನು ಕೊಟ್ಟಿದೆ. ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಏಕೆ ನೋಟಿಫಿಕೇಷನ್ ಇಷ್ಯೂ ಆಗಿಲ್ಲವೆಂದರೆ, 371(ಜೆ) ಇದ್ದ ಪ್ರಯುಕ್ತ ಇನ್ನೂ ಇಷ್ಯೂ ಮಾಡಿರಲಿಲ್ಲ. ಈಗ ಕೂಡಲೇ ಅದನ್ನು ಮಾಡುತ್ತೇವೆ. ಉಳಿದ 619 ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. 619 ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಹೈದರಾಬಾದ್‌ನಲ್ಲಿರುವ ವಿಸ್ತೀರ್ಣದ ವ್ಯಾಪ್ತಿಗೆ ಅನುಗುಣವಾಗಿ ಮಾಡಬೇಕೆಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ್ದಾರೆ. ಆದ್ದರಿಂದ, ಆ ಬಗ್ಗೆ ಕೂಡ ಮಾಹಿತಿ ತರಿಸಿಕೊಂಡು ಪರಿಶೀಲನೆ ಮಾಡಿ ಏನು ಕ್ರಮ ಕೈಗೊಳ್ಳಬೇಕೋ ಆ ಪ್ರಕಾರ ಮಾಡುತ್ತೇವೆ.

ಕಲ್ಲು ಗಣಿಗಾರಿಕೆ

23 (239) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಲೆನಾಡಿನಲ್ಲಿ ಕಲ್ಲುಗಣಿಗಾರಿಕೆಗೆ ಅವಕಾಶ ಕಲ್ಪಿಸಲಾಗಿದೆಯೇ, ಹಾಗಿದ್ದಲ್ಲಿ ಇದರ ಮಾನದಂಡಗಳೇನು;

(ಆ) ಜನವಸತಿ ಇರುವ ಜಾಗದಲ್ಲಿ ಗಣಿಗಾರಿಕೆಗೆ ಅವಕಾಶ ಇರುವುದೇ;

(ಇ) ನರಸಿಂರಾಜಪುರ ತಾಲ್ಲೂಕು, ಮುತ್ತಿನಕೊಪ್ಪ ಇಲ್ಲಿ ಯಾವುದಾದರೂ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿದೆಯೇ;

(ಈ) ನೀಡಿದ್ದಲ್ಲಿ, ಇದರಿಂದ ಆ ಭಾಗದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮಡಿಕೇರಿ ಜಿಲ್ಲೆಗಳಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ 1994 ರನ್ವಯ ಗಣಿಗಾರಿಕೆಗೆ